**ನೋಟು ಕಟ್ಟುಗಳಿಗೆ ಪಿನ್ ಹಾಕುವುದನ್ನು–ನಿವಾರಿಸುವುದು**
**ಭಾರತೀಯ ರಿಸರ್ವ್ ಬ್ಯಾಂಕು**
**ಕೇಂದ್ರ ಕಚೇರಿ**
**ಬ್ಯಾಂಕಿಂಗ್ ಕಾರ್ಯಾಚರಣೆಗಳ ಮತ್ತು ಅಭಿವೃದ್ಧಿ ಇಲಾಖೆ**
**ಕೇಂದ್ರ–1, ವಿಶ್ವ ವ್ಯಾಪಾರ ಕೇಂದ್ರ**
**ಕಫೆ ಪರೇಡ್, ಕೊಲಾಬಾ, ಮುಂಬೈ– 400005.**

ನವೆಂಬರ್ 7, 2001
ಕಾರ್ತೀಕ 16, 1923 (ಶಕ)

ಡಿಬಿಒಡಿ ಸಂಖ್ಯೆ. ಡಿಐಆರ್.ಬಿಸಿ. 42/13.03.00/2001–02

ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ, 1949ರ 35ಎ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಭಾರತೀಯ ರಿಸರ್ವ್ ಬ್ಯಾಂಕು ಸಾರ್ವಜನಿಕ ಹಿತದೃಷ್ಟಿಯಿಂದ ಈ ಮುಂದಿನಂತೆ ಮಾಡುವುದು ಅಗತ್ಯ ಮತ್ತು ವಿಹಿತ ಎಂದು ಮನಗಂಡು ಇನ್ನು ಮುಂದೆ ಮತ್ತು ತಕ್ಷಣದಿಂದ ಜಾರಿಗೆ ಬರುವಂತೆ;

i. ಹೊಸ/ಪುನರ್ ಬಳಸಬಹುದಾದ/ಬಳಸಲಾಗದಂಥ ನೋಟಿನ ಕಟ್ಟುಗಳಿಗೆ ಬ್ಯಾಂಕುಗಳು ಪಿನ್ ಹಾಕುವುದನ್ನು ಕೈಬಿಡಬೇಕು ಮತ್ತು ಅದರ ಬದಲಿಗೆ ನೋಟಿನ ಕಟ್ಟುಗಳನ್ನು ಕಾಗದದ ಪಟ್ಟಿಗಳಿಂದ ಭದ್ರಪಡಿಸಬೇಕು.

ii. ಬ್ಯಾಂಕುಗಳು ನೋಟುಗಳನ್ನು ಪುನರ್ ಬಳಸುವಂತಹ ಮತ್ತು ಬಳಸಲಾಗದಂತಹ ನೋಟುಗಳಾಗಿ ವಿಂಗಡಿಸಿ ಬಳಕೆ ಯೋಗ್ಯವಾದ ನೋಟುಗಳನ್ನು ಮಾತ್ರ ಸಾರ್ವಜನಿಕರಿಗೆ ನೀಡಬೇಕು. ಬ್ಯಾಂಕುಗಳು ಕರೆನ್ಸಿ ಭಂಡಾರಗಳ ಮೂಲಕ ಒಳಮುಖ ಹಣ ರವಾನೆಗಳಲ್ಲಿ ಕೊಳೆಯಾದ ನೋಟುಗಳನ್ನು ಪಿನ್ ಹಾಕದ ಸ್ಥಿತಿಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್‌ಗೆ ಸಲ್ಲಿಸಬೇಕು.

iii. ಬ್ಯಾಂಕುಗಳು ಬ್ಯಾಂಕು ನೋಟುಗಳ ವಾಟರ್ ಮಾರ್ಕ್ ವಿಂಡೋ ಮೇಲೆ ಯಾವುದೇ ರೀತಿಯ ಬರವಣಿಗೆಯನ್ನು ಕೂಡಲೇ ನಿಲ್ಲಿಸತಕ್ಕದ್ದು.

(ಕೆ.ಎಲ್. ಕೇತಾರ್ ಪೌಲ್)
ಕಾರ್ಯನಿರ್ವಾಹಕ ನಿರ್ದೇಶಕ.